Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 115/2021

ದಿನಾಂಕ ಃ 25.06.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ:25 ಪಿ. ಡಬ್ಲ್ಯೂ:18

| | |
|---|---|
| ಸಾಕ್ಷಿದಾರರ ಹೆಸರು | ವಜ್ರ ಸಿ ಜಿ |
| ತಂದೆಯ ಹೆಸರು | ಗೋಪಾಲ ಕೆ |
| ವಯಸ್ಸು | 42 ವರ್ಷ |
| ಉದ್ಯೋಗ | ಹೆಚ್ ಸಿ, ಸಿ ಹೆಚ್ ಸಿ 276, ಬಿಂಡಿಗನವಿಲೆ ಪೊಲೀಸ್ ಠಾಣೆ |
| ವಾಸ | ಬಿಂಡಿಗನವಿಲೆ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ನಾನು ದಿಃ 13.10.2019 ರಿಂದ 26.06.2023 ರವರೆಗೆ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿದ್ದೇನೆ,

2) ದಿಃ 05.06.2020 ರಂದು ಮೊಕದ್ದಮೆ ನಂಃ 94/2020 ರಲ್ಲಿ ಚಾಸಾ.26 ದಯಾನಂದ್- ಪಿಎಸ್ಐ ರವರು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಘಟನೆ ನಡೆದಿದ್ದ ಸ್ಥಳವಾಗಿದ್ದ ನಾಗಮಂಗಲ ತಾಲ್ಲೂಕಿನ ಕೃಷ್ಣಾಪುರ ಗ್ರಾಮದ ಗಾಯಾಳು ವಾಸವಾಗಿದ್ದ ಮನೆಗೆ ಹೋಗಿದ್ದರು. ಪಿರ್ಯಾದಿ ಘಟನಾ ಸ್ಥಳವನ್ನು ನಮಗೆ ತೋರಿಸಿದ್ದರು. ಘಟನಾ ಸ್ಥಳದಲ್ಲಿ, ಚಾಸಾ.26 ರವರು ಮಹಜರ್ ಕ್ರಮವನ್ನು ಜರುಗಿಸಿದರು ಹಾಗೂ ಚಾಸಾ 26 ರವರು ಹೇಳಿದ ಮಹಜರ್ ಕ್ರಮವನ್ನು ನಾನು ನನ್ನ ಕೈ ಬರಹದಲ್ಲಿ ಬರೆದಿರುತ್ತೇನೆ. ಸದರಿ ಮಹಜರನ್ನು ಬೆಳಗ್ಗೆ 11.30 ರಿಂದ ಮಧ್ಯಾಹ್ನ 1.30 ರವರಗೆ ಮಾಡಲಾಯಿತು. ಪಿರ್ಯಾದಿ ಹಾಜರು ಪಡಿಸಿದ ಒಂದು ಜವಳಿ ಕುಡಗೋಲು ಮತ್ತು ಗಾಯದ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು. ಸ್ಥಳದಲ್ಲಿ ಬಿದ್ದಿದ್ದ ರಕ್ತದ ಕಲೆಯಾಗಿದ್ದ ಮಣ್ಣನ್ನು ಮತ್ತು ಸಾದಾ ಮಣ್ಣು ಎರಡನ್ನೂ ಶೇಖರಿಸಿಕೊಂಡು ಮಹಜರ್ ಮುಖೇನ ಅಮಾನತ್ತು ಪಡಿಸಿಕೊಳ್ಳಲಾಯಿತು.

3) ದಿಃ 12.06.2020 ರಂದು ಆರೋಪಿಯನ್ನು ಪಿಎಸ್ಐ ರವರು ದಸ್ತಗಿರಿ ಮಾಡಿ, ಆರೋಪಿ ತೋರಿಸಿದ ಘಟನಾ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಲಾಯಿತು. ಸದರಿ ಮಹಜರನ್ನು ನಾನು ನನ್ನ ಕೈ ಬರಹದಲ್ಲಿ

ಬರೆದಿರುತ್ತೇನೆ. ಈಗ ನನಗೆ ತೋರಿಸಿದ ನಿಪಿ.3 ಮಹಜರನ್ನು ನೋಡುತ್ತಿದ್ದು, ಇದರಲ್ಲಿ ಇರುವ ಕೈ ಬರಹದ ಬರವಣಿಗೆ ನನ್ನದಾಗಿರುತ್ತದೆ. ಮೇಲೆ ಹೇಳಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ.1 ರಿಂದ 5 ನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎನ್.ಎನ್. ವಕೀಲರಿಂದಃ</u>**

1) ಮಹಜರ್ ನ್ನು ನನ್ನ ಕೈ ಬರವಣಿಗೆಯಲ್ಲಿ ಬರೆದಿದ್ದೇನೆ ಎನ್ನುವುದಕ್ಕೆ, ಸದರಿ ಮಹಜರಗಳಲ್ಲಿ ನಮೂದು ಇರುವುದಿಲ್ಲ ಹಾಗೂ ಮಹಜರ್ ನನ್ನ ಕೈ ಬರಹದಲ್ಲಿ ಇದೆ ಎನ್ನುವುದಕ್ಕೆ ನನ್ನ ಸಹಿ ಮತ್ತು ನನ್ನ ಹೆಸರು ನಮೂದು ಇರುವುದಿಲ್ಲ. ಕೃತ್ಯ ನಡೆದ ಸ್ಥಳ ದ ಕಚ್ಚಾ ನಕ್ಷೆಯಲ್ಲಿ, ನನ್ನ ಹೆಸರು ಮತ್ತು ಸಹಿ ಇಲ್ಲ ಎಂದರೆ ಸರಿ. ದಿಃ 12.06.2020 ರ ಮಹಜರಿನಲ್ಲಿ, ನಾನು ಚಾಸಾ 26 ರವರೊಂದಿಗೆ ಹೋಗಿದ್ದೆ ಎನ್ನುವುದಕ್ಕೆ ಇದರ ನಮೂದಿಲ್ಲ ಎಂದರೆ ಸರಿ. ನಿಪಿ.10 ಮಹಜರಿನಲ್ಲಿ, ಮಹಜರ್ ಬರವಣಿಗೆ ನನ್ನ ಕೈ ಬರಹದಲ್ಲಿದೆ ಎಂಬುದನ್ನು ನಮೂದು ಮಾಡಿಲ್ಲ ಎಂದರೆ ಸರಿ ಹಾಗೂ ಸದರಿ ಮಹಜರಿನಲ್ಲಿ ನನ್ನ ಸಹಿ ಮತ್ತು ಹೆಸರು ನಮೂದಿಲ್ಲ ಎಂದರೆ ಸರಿ. ದಿಃ 05.06.2020 ಮತ್ತು ದಿಃ12.06.2020 ರಂದು ನಾನು ಮಹಜರ್ ಕ್ರಮದಲ್ಲಿ ಭಾಗವಹಿಸಿರಲಿಲ್ಲ ಮತ್ತು ಈ ಮಹಜರ್ ಗಳನ್ನು ನನ್ನ ಕೈ ಬರಹದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಈ ಎರಡೂ ಮಹಜರ್ ಗಳನ್ನು ನಮ್ಮ ಠಾಣೆಯಲ್ಲೇ ಮಾಡಿದ್ದೆವು ಎಂದರೆ ಸರಿಯಲ್ಲ. ಮುಮಾ.1 ಜವಳಿ ಕುಡಗೋಲನ್ನು ಗಾಯಾಳುವಿಗೆ ತೋರಿಸಿ ವಶಪಡಿಸಿಕೊಂಡಿದ್ದೀರಾ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು ಆ ಸಮಯದಲ್ಲಿ ಸ್ಥಳದಲ್ಲಿ ಇರಲಿಲ್ಲ, ಹಾಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಉತ್ತರಿಸುತ್ತಾರೆ. ಮುಮಾ1 ರಿಂದ 5 ವಸ್ತುಗಳನ್ನು ಗಾಯಾಳುವಿನ ಅನುಪಸ್ಥಿತಿಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಗಾಯಾಳು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುತ್ತಿದ್ದರು ಎಂದು ಉತ್ತರಿಸುತ್ತಾರೆ. ಮು ಮಾ 1 ರಿಂದ 5 ವಸ್ತುಗಳನ್ನು ಕೇಸಿಗೋಸ್ಕರ ಸೃಷ್ಟಿಮಾಡಲಾಗಿದೆ ಎಂದರೆ ಸರಿಯಲ್ಲ.

2) ನಿಪಿ.4 ರಿಂದ ನಿಪಿ.9 ಯಾವುದೇ ಫೋಟೋಗಳಲ್ಲಿ ನಾನು ಇರುವುದಿಲ್ಲ ಎಂದರೆ ಸರಿ. ಪ್ರಕರಣಕ್ಕಾಗಿ ನಿಪಿ.4 ರಿಂದ ನಿಪಿ.9 ರಿಂದ ಫೋಟೋಗಳನ್ನು ಸೃಷ್ಟಿಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಪಿರ್ಯಾದಿ ಕುಡಗೋಲು ಮತ್ತು ಬಟ್ಟೆಗಳನ್ನು ತಂದು ಹಾಜರು ಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಕೇಸಿಗಾಗಿ ಕುಡಗೋಲು ಮತ್ತು ಬಟ್ಟೆಗಳನ್ನು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.3 ಮಹಜರ್ ಪುಟ ನಂಃ 5 ರ Sl. No.12 ರಲ್ಲಿ ನಮೂದಿಸಿದ್ದ 2 ಸಮಯವನ್ನು ತಿದ್ದಿ 0 ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು, ಪೆನ್ನು ಸರಿಯಾಗಿ ಬರೆಯುತ್ತಿರಲಿಲ್ಲ , ಆದ್ದರಿಂದ ಸಮಯವನ್ನು ಮತ್ತೆ ತಿದ್ದಿ ಬರೆಯಲಾಗಿದೆ ಎಂದು ಉತ್ತರಿಸುತ್ತಾರೆ. 2 ಅಂತ ಬರೆದು ನಂತರ ಅದನ್ನು ತಿದ್ದುಪಡಿ ಮಾಡಿ, ತಿದ್ದಿ 0 ಅಂತ ಬರೆಯಲಾಗಿದೆ ಎಂದರೆ

ಸರಿಯಲ್ಲ. ನಿಪಿ.3 ಮತ್ತು ನಿಪಿ.10 ಮಹಜರ್ ನಲ್ಲಿ ನಾನು ಭಾಗವಹಿಸದೇ ಇದ್ದರೂ ಸಹ, ಎರಡೂ ಮಹಜರ್ ಗಳನ್ನು ನಾನು ನನ್ನ ಕೈ ಬರಹದಲ್ಲಿ ಬರೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.